

ಇದು ಸಗ್ಗದ ಹಾದಿ, ಜಕರಂಡದ ಸುಗ್ಗಿಯ ದಿನಗಳ ಹಾದಿ

'ಪರಿಮಳಯುಕ್ತ'. 'ಮಿಮೋಸಿಫೋಲಿಯಾ' ಎಂಬ ನಿರ್ದಿಷ್ಟ ಹೆಸರು ಮಿಮೋಸಾ (ಟಚ್ ಮಿ ನಾಟ್) ಎಲೆಗಳನ್ನು ಹೋಲುತ್ತದೆ ಎಂದರ್ಥ.

ಜಕರಂಡ ಮಧ್ಯಮ ಗಾತ್ರದ, ತೆರೆದ ಕಿರೀಟದಂತಿರುವ ಮೇಲಾವರಣ ಹೊಂದಿರುವ ಎಲೆಯುದುರುವ ಮರವಾಗಿದ್ದು, ನೋಡಲು ಬಹಳ ಆಕರ್ಷಕವಾಗಿದೆ. ಕೊಂಬೆಗಳು ತೆಳು; ಸ್ವಲ್ಪ ಅಂಕುಡೊಂಕಾಗಿದ್ದು ತಿಳಿ ಕೆಂಪು–ಕಂದು ಬಣ್ಣವನ್ನು ಹೊಂದಿರುತ್ತವೆ. ತೊಗಟೆ ಬೂದು–ಕಂದು ಬಣ್ಣ; ಮರವು ಚಿಕ್ಕದಾಗಿದ್ದಾಗ ತೊಗಟೆ ನಯವಾಗಿ ತೆಳ್ಳಗಿರುತ್ತದೆ. ಕಾಲಾಂತರದಲ್ಲಿ ಬಿರುಕು ಬಿಟ್ಟ ತೊಗಟೆಯಾಗಿ ಮಾರ್ಪಾಡಾಗುತ್ತದೆ. ಎಲೆಗಳು ಜರೀಗಿಡದಂತಹ ಗರಿಗಳಿರುವ ಹಲವಾರು ಜೋಡಿ ಸಣ್ಣ ಸಣ್ಣ ಮೊನಚಾದ ಎಲೆಗಳನ್ನು ಹೊಂದಿದ್ದು, ಗುಲ್‌ಮೊಹರ್ ಎಲೆಗಳನ್ನು ಹೋಲುತ್ತವೆ. ಹೂವುಗಳು ಕೊಳವೆಯಾಕಾರದ (ಗಂಟೆ ಆಕಾರದ), ಲ್ಯಾವೆಂಡರ್ ಅಥವಾ ನೇರಳೆ ನೀಲಿ ಬಣ್ಣದಾಗಿದ್ದು, ಶಾಖೆಗಳ ತುದಿಯಲ್ಲಿ ತೆರೆದ ಸಮೂಹಗಳಲ್ಲಿ ಗುಂಪುಗೂಡಿರುತ್ತವೆ.

ಪ್ರತ್ಯೇಕ ಹೂವು ಸುಮಾರು 2 ಇಂಚು ಉದ್ದವಿರುತ್ತದೆ. ಹಣ್ಣಿನ ಪಾಡ್ (**fruit pod**) ಕಂದು ಬಣ್ಣದ್ದಾಗಿದ್ದು, ಅದನ್ನು ತಾಂತ್ರಿಕ ನುಡಿಗಟ್ಟಿನಲ್ಲಿ ಕ್ಯಾಪ್ಸುಲ್ ಎಂದು ಕರೆಯಲಾಗುತ್ತದೆ; ಇವು 2 ವರ್ಷಗಳವರೆಗೆ ಮರದ ಮೇಲೆ ತೂಗು ಹಾಕಿಕೊಂಡಿರುತ್ತವೆ. ಒಣಗುವಾಗ ತಾನೇತಾನಾಗಿ ಎರಡು ಭಾಗಗಳಾಗಿ ತೆರೆದುಕೊಂಡು ರೆಕ್ಕೆಯುಳ್ಳ ಬೀಜಗಳನ್ನು ಬಿಡುಗಡೆ ಮಾಡುತ್ತವೆ.

ಜಕರಂಡ ಮರವನ್ನು ಅಲಂಕಾರಿಕ ಮತ್ತು ಸೌಂದರ್ಯದ ಮೌಲ್ಯದ ದೃಷ್ಟಿಯಿಂದ ಬೆಳೆಸುತ್ತಾರೆ. ವಾಸ್ತವದಲ್ಲಿ ಇದು ಅಪಾರ ವಾಣಿಜ್ಯ ಮೌಲ್ಯವನ್ನೂ ಹೊಂದಿದೆ. ಅಲಂಕಾರಿಕ (ಕೆನೆ ಮತ್ತು ಗುಲಾಬಿ ಬಣ್ಣದ ಗೆರೆಗಳಿರುವ) ಸುಗಂಧ ಭರಿತ ಮರ ಹೆಚ್ಚು ಮೌಲ್ಯಯುತವಾಗಿದ್ದು, ಈ ಮರವನ್ನು ಕ್ಯಾಬಿನೆಟ್ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಐಷಾರಾಮಿ ಕಾರುಗಳ ವಾಹನ ಉದ್ಯಮದ ಮರಗೆಲಸದಲ್ಲೂ ಬಳಸಲಾಗುತ್ತದೆ.

ಜಕರಂಡದ ಔಷಧೀಯ ಮೌಲ್ಯಗಳು ಅಪಾರ. ಅದರ ಸ್ಥಳೀಯ ಪ್ರದೇಶವಾದ ದಕ್ಷಿಣ ಅಮೆರಿಕದಲ್ಲಿ ಬುಡಕಟ್ಟು ಜನರು ಈ ಮರವನ್ನು ಗಿಡಮೂಲಿಕೆ ಔಷಧಿಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಬ್ಯಾಕ್ಟೀರಿಯಾ ಸೋಂಕು ಚಿಕಿತ್ಸೆಯಲ್ಲಿ ಬಳಸಲಾಗುವ ಜಕರಂಡ, ಲೈಂಗಿಕವಾಗಿ ಹರಡುವ ಸಿಫಿಲಿಸ್ ಮತ್ತು ಗೊನೊರಿಯಾ ರೋಗಗಳ ಚಿಕಿತ್ಸೆಯಲ್ಲಿ ಬಹಳಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಸಿಫಿಲಿಟಿಕ್ ಹುಣ್ಣುಗಳ ಮೇಲೆ ಜಕರಂಡ ಸಾರವನ್ನು ಸವರುವುದರಿಂದ



ಗೊನೊರಿಯಾ ರೋಗಿಗಳಲ್ಲಿ ಕೀವು ಜೊತೆಗೂಡಿ ನೋವಿನ ಮೂತ್ರ ವಿಸರ್ಜನೆಯನ್ನು ನಿಯಂತ್ರಿಸುವುದರ ಜೊತೆಗೆ ಅವು ವೇಗವಾಗಿ ಗುಣವಾಗಲು ಸಹಾಯ ಮಾಡುತ್ತದೆ.

ಜಕರಂಡ ಎಲೆಗಳು ಮತ್ತು ತೊಗಟೆಯಿಂದ ತಯಾರಿಸಿದ ಬಾಷ್ಪಶೀಲ ತೈಲವು ಲೈಂಗಿಕ ರೋಗಗಳಿಂದ ಉಂಟಾಗುವ 'ಬುಬೊ'ಗಳ (ತೊಡೆಸಂದು ಅಥವಾ ಕಂಕುಳು ಸಂದುಗಳಲ್ಲಿ ಉಂಟಾಗುವ ದುಗ್ಧರಸ ಗ್ರಂಥಿಗಳಲ್ಲಿನ ಊತ ಗುಳ್ಳೆಗಳು) ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿ ಕಂಡುಬಂದಿದೆ. ಜಕರಂಡ ಹೂವುಗಳ ಸುಗಂಧವು ನಮ್ಮಲ್ಲಿನ ನಕಾರಾತ್ಮಕ ಗುಣಗಳನ್ನು ಧನಾತ್ಮಕವಾಗಿ ಪರಿವರ್ತಿಸುವುದರ ಮೂಲಕ 'ಹೆಚ್ಚುವರಿ ಔಷಧಿ'ಯವಾಗಿ ಕೆಲಸ ಮಾಡುತ್ತದೆ ಎಂದು ಹೇಳಲಾಗುತ್ತದೆ. ಹೋಮಿಯೋಪತಿಯಲ್ಲಿ ಹಲವು ರೀತಿಯ ಔಷಧಿಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

ಜಕರಂಡ ಒಂದು ಬಹೂಪಯೋಗಿ ಮರ. ಅದರ ವೈಭವವನ್ನು ಬೇರೆ ಯಾವ ಮರವೂ ಸರಿಗಟ್ಟಲು ಸಾಧ್ಯವಿಲ್ಲ ಎನ್ನುವ ಮಾತು ಅತಿಶಯೋಕ್ತಿಯಲ್ಲ.

ಪ್ರತಿಕ್ರಿಯಿಸಿ: **feedback@sudha.co.in**

## ಜಕರಂಡ! ಕೆಲವು ಕಿವಿಮಾತು

- ಉದ್ಯಾನವನ ಹಾಗೂ ಅವೆನ್ಯೂಗಳಲ್ಲಿ (ರಸ್ತೆಗಳಲ್ಲಿ) ನೆಡಲು ಅತ್ಯುತ್ತಮವಾದ ಮರ. ಉದ್ಯಾನವನಗಳಲ್ಲಿ ಗುಂಪಾಗಿಯೂ ರಸ್ತೆಗಳಲ್ಲಿ ಸಾಲಾಗಿ ನೆಟ್ಟರೆ ನೋಡಲು ಬಲು ಚಂದ.
- ಹಣ್ಣಿನ ಪಾಡ್‌ಗಳನ್ನು ಬಿಸಿಲಿನಲ್ಲಿ ಒಣಗಿಸಿ. ನಂತರ ಒಂದು ಪಾತ್ರೆಯಲ್ಲಿ ಹಾಕಿ, ತಣ್ಣೀರು ಸುರಿದು ಮುಚ್ಚಳದಿಂದ ಮುಚ್ಚಿ. ಪಾಡ್ ಸಿಡಿದು ಬೀಜಗಳು ಹೊರಬರುತ್ತವೆ. ಬಿತ್ತುವ ಮೊದಲು ಬೀಜಗಳನ್ನು ರಾತ್ರಿಯಿಡೀ ನೀರಿನಲ್ಲಿ ನೆನೆಸಿಡಿ. ಅವು ಸುಲಭವಾಗಿ ಮೊಳಕೆಯೊಡೆಯುತ್ತವೆ.
- ಮರಳು ಮಿಶ್ರಿತ ಮಣ್ಣಿನಲ್ಲಿ ಸುಲಭವಾಗಿ ಬೆಳೆಯುವುದರಿಂದ ಮಣ್ಣಿನ ಮಾಧ್ಯಮದಲ್ಲಿ ಹೆಚ್ಚುವರಿ ಮರಳಿನ ಪ್ರಮಾಣವನ್ನು ಮಿಶ್ರಣ ಮಾಡುವುದು ಉತ್ತಮ.
- ಗಿಡಗಳು ಸರಿಯಾದ ಎತ್ತರಕ್ಕೆ ನೇರವಾಗಿ ಬೆಳೆಯುವಂತೆ ಮಾಡಲು 'ಸ್ಟಾಕಿಂಗ್' ಅಗತ್ಯವಿದೆ. ಗಿಡಗಳ ಆಸರೆಗಾಗಿ ಕಾಂಡವನ್ನು ಗಟ್ಟಿಯಾದ ಉದ್ದನೆಯ ಮರದ ಕಂಬಗಳಿಂದ ಕಟ್ಟಿ.
- ಒಳ್ಳೆಯ ಆಕಾರ ಹಾಗು ಪ್ರದರ್ಶನಕ್ಕಾಗಿ ಗಿಡದ ಅನವಶ್ಯಕ ಭಾಗಗಳನ್ನು ಕತ್ತರಿಸಿ ಹಾಕುವುದು ಅಗತ್ಯ. ಹೂ ಬಿಡುವ ಮುನ್ನ ಟ್ರಿಮ್ ಮಾಡುವುದು ಸೂಕ್ತ.
- ಇದು ವೇಗವಾಗಿ ಬೆಳೆಯುವ ಮರವಾಗಿದ್ದು, ಕಾಂಡಗಳು ಮುರಿದರೆ ಬೇಗ ಚಿಗುರಿ ಮತ್ತೆ ಬೆಳೆಯುತ್ತವೆ.
- ದಶಕಗಳ ಹಿಂದೆಯೇ ಭಾರತಕ್ಕೆ ಪರಿಚಯಿಸಲಾಗಿದ್ದರೂ ಈ ಮರವನ್ನು ವಾಣಿಜ್ಯಕವಾಗಿ ಸರಿಯಾಗಿ ಬಳಸಿಕೊಳ್ಳಲಾಗಿಲ್ಲ. ಔಷಧಿ ತಯಾರಿಕೆ ಹಾಗೂ ಮೌಲ್ಯಯುತ ಮರಗೆಲಸದಲ್ಲಿ ಹೆಚ್ಚಿನ ಬಳಕೆಗೆ ಅವಕಾಶವಿದೆ.